ಓ ಎಸ್ ನಂಃ 144-14
ಡಿ ಡಬ್ಲ್ಯೂ ಃ 5

ದಿಃ 07-04-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಂ ಎಂ ಎ ವಕೀಲರಿಂದ

9. ಈ ದಾವೆಯ ಪಕ್ಷಗಾರರ ಜೊತೆ 2, 3, 8 ಮತ್ತು 9 ಪ್ರತಿವಾದಿಗಳ ಜೊತೆ ನನ್ನ ಸಂಬಂಧ ಚೆನ್ನಾಗಿರುವುದಿಲ್ಲ. ಉಳಿದ ಪಕ್ಷಗಾರರ ಜೊತೆ ನನ್ನ ಸಂಬಂಧ ಚೆನ್ನಾಗಿರುತ್ತದೆ. ನನ್ನ ಸಂಬಂಧ ಈ ದಾವೆಯ ವಾದಿಗಳ ಜೊತೆ ಚೆನ್ನಾಗಿರುವುದಿಲ್ಲ. 1982 ರಿಂದ ನನ್ನ ಸಂಬಂಧ ವಾದಿಗಳ ಜೊತೆ ಚೆನ್ನಾಗಿರುವುದಿಲ್ಲ. ದಾವಾ ಆಸ್ತಿಗಳಲ್ಲಿ ಯಾವುದೇ ಆಸ್ತಿ ಪಿತ್ರಾರ್ಜಿತ ಆಸ್ತಿ ಇರುವುದಿಲ್ಲ. ನಾನು 1979 ರಲ್ಲಿ ಕೇತೋಹಳ್ಳಿಗೆ ಬಂದಿರುತ್ತೇನೆ. ನಾನು ಅದರ ಮೊದಲು ವಿದ್ಯಾಭ್ಯಾಸ ಮಾಡುವಾಗ ಕೇತೋಹಳ್ಳಿಗೆ ಬಂದು ಹೋಗಿ ಮಾಡುತ್ತಿದ್ದೆ. 1979 ರಿಂದ ನಾನು ಕೇತೋಹಳ್ಳಿಯಲ್ಲಿ ವಾಸವಿರುತ್ತೇನೆ. ದಾವಾ ಆಸ್ತಿಗಳಲ್ಲಿ ನನ್ನ ತಂದೆ ತೀರಿಕೊಂಡ ನಂತರ ಕೊಂಡುಕೊಂಡ ಜಮೀನು ಯಾವುದೇ ಇರುವುದಿಲ್ಲ. ಸಾಕ್ಷಿ ಮುಂದುವರೆದು 2016 ರಲ್ಲಿ ನನ್ನ ಸ್ವಂತ ಸಂಪಾದನೆಯಲ್ಲಿ 10 ಗುಂಟೆ ಆಸ್ತಿಯನ್ನು ಖರೀದಿ ಮಾಡಿರುತ್ತೇನೆ ಎಂದು ಹೇಳುತ್ತಾರೆ.

10. ನಾನು 1983 ರಲ್ಲಿ ವಕೀಲಿ ವೃತ್ತಿಯನ್ನು ಆರಂಭಿಸಿರುತ್ತೇನೆ. ನಾನು 1983 ರಿಂದ ಸಂಪಾದನೆ ಮಾಡುವುದನ್ನು ಶುರು ಮಾಡಿರುತ್ತೇನೆ. ನನ್ನ ತಂದೆ ತೀರಿಕೊಂಡ ನಂತರ ಸರ್ವೇ ನಂ 23/4 ರಲ್ಲಿ 2 ಎಕರೆ 23 ಗುಂಟೆ ಆಸ್ತಿ (ಐಟಂ ನಂ 14) ಯನ್ನು ಮಾರಾಟ ಮಾಡಲಾಗಿದೆ. 8 ನೇ ಪ್ರತಿವಾದಿ ಈ ದಾವೆಯಲ್ಲಿ ಸೇರ್ಪಡೆಯಾಗಿರುವ ವಿಷಯ ಗೊತ್ತಾದ ನಂತರ ನನಗೆ ಮೃತ್ಯುಪತ್ರ ನಿಡಿ 2 ರ ಬಗ್ಗೆ ಗೊತ್ತಾಗಿರುತ್ತದೆ. ನಿಡಿ 2 ಗೊತ್ತಾಗುವ ಮೊದಲು ನಮ್ಮ ಕುಟುಂಬದಲ್ಲಿ ಭಾಗ ಮಾಡಿಕೊಳ್ಳುವ ಪ್ರಯತ್ನ ಮಾಡಿದ್ದೀರಾ ಎಂದರೆ ಅದರ ಅವಶ್ಯಕತೆ ಇರಲಿಲ್ಲ, ಕಾರಣ ನನ್ನ ತಂದೆ ಈ ವಿಷಯ ಹೇಳಿರಲಿಲ್ಲ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ನನ್ನ ತಂದೆ ನನಗೆ ಹಾಗೂ 5 ನೇ ಪ್ರತಿವಾದಿಗೆ ಭಾಗ ಮಾಡಿಕೊಳ್ಳುವಂತೆ ತಿಳಿಸಿದ್ದರು ಎಂದು ಹೇಳುತ್ತಾರೆ. ನನ್ನ ತಂದೆ ನನಗೆ ಹಾಗೂ 5 ನೇ ಪ್ರತಿವಾದಿಗೆ ಆಸ್ತಿಗಳಲ್ಲಿ ಭಾಗ ಮಾಡಿಕೊಳ್ಳುವಂತೆ ಲಿಖಿತ ರೂಪದಲ್ಲಿ ಹೇಳಿಲ್ಲ ಆದರೆ ಈ ವಿಷಯ ಈ ದಾವೆಯ ಉಳಿದ ಪಕ್ಷಗಾರರಿಗೆ ಗೊತ್ತಿದೆ. 14 ನೇ ದಾವಾ ಆಸ್ತಿಯನ್ನು ಮಾರಾಟ ಮಾಡುವಾಗ ನಮ್ಮ ಕುಟುಂಬದ ಉಳಿದ ಸದಸ್ಯರ ಸಮ್ಮತಿಯ ಅವಶ್ಯಕತೆ ಇರಲಿಲ್ಲ, ವಾದಿಗಳಿಗೆ ಹಾಗೂ 7 ನೇ ಪ್ರತಿವಾದಿಗೆ ಹಣವನ್ನು ಕೊಡಬೇಕೆಂಬ ಉದ್ದೇಶದಿಂದ 14 ನೇ ದಾವಾ ಆಸ್ತಿಯನ್ನು ಮಾರಾಟ ಮಾಡಲಾಗಿದೆ. 14 ನೇ ದಾವಾ

ಆಸ್ತಿಯ ಕ್ರಯಪತ್ರಕ್ಕೆ ವಾದಿಗಳು ಹಾಗೂ 7 ನೇ ಪ್ರತಿವಾದಿ ಸಾಕ್ಷಿದಾರರು ಇರುವುದಿಲ್ಲ ಆದರೆ ಅವರಿಗೆ ಕ್ರಯದ ಬಗ್ಗೆ ಮಾಹಿತಿ ಇತ್ತು.

11. 1979 ರಲ್ಲಿ ನಾನು ಕೇತೋಹಳ್ಳಿಗೆ ಬಂದಾಗ ಸರ್ವೆ ನಂ 45/1 ರಲ್ಲಿ ತೆಂಗಿನ ಪಸಲು ಶುರು ಆಗಿರಲಿಲ್ಲ, ನಾನು ಹೋದ ನಂತರ ತೆಂಗಿನ ಸಸಿ ನೆಡಲು ಸಾಲ ಮಾಡಲಾಗಿದೆ. 1979 ರಲ್ಲಿ ನಮ್ಮ ಕುಟಂಬದ ಖರ್ಚು ವೆಚ್ಚವನ್ನು ನಾನೇ ನೋಡಿಕೊಳ್ಳುತ್ತಿದ್ದೆ. ಸಾಕ್ಷಿ ಮುಂದುವರೆದು ನಾನು ಕ್ಯಾಷಿಯರ್ ಆಗಿ ಕೆಲಸ ಮಾಡುತ್ತಿದ್ದೆ. ನಮ್ಮ ಕುಟುಂಬದ ಕೃಷಿಯನ್ನು ನನ್ನ ತಾಯಿ ನೋಡಿಕೊಳ್ಳುತ್ತಿದ್ದು ಆದರೆ ನನಗೆ ಹೇಳಿ ಕೃಷಿ ಚಟುವಟಿಕೆಗಳನ್ನು ನನಗೆ ಹಾಗೂ ನನ್ನ ಅಣ್ಣನಿಂದ ಮಾಡಿಸುತ್ತಿದ್ದರು.

12. ನಿಡಿ 2 ರಲ್ಲಿ ಆಸ್ತಿಗಳನ್ನು 8, 9 ಮತ್ತು 14 ನೇ ಪ್ರತಿವಾದಿಗಳಿಗೆ ಕೊಟ್ಟಿರುತ್ತಾರೆ. 14 ನೇ ಪ್ರತಿವಾದಿಗೆ ನಿಡಿ 2 ರಲ್ಲಿ ಮನೆಯನ್ನು ಕೊಟ್ಟಿದ್ದು 8 ಮತ್ತು 9 ನೇ ಪ್ರತಿವಾದಿಗಳಿಗೆ ತಲಾ ಒಂದೊಂದು ನಿವೇಶನಗಳನ್ನು ಕೊಟ್ಟಿರುತ್ತಾರೆ. ನಿಡಿ 2 ರಲ್ಲಿ ಉಳಿಕೆ ಆಸ್ತಿಯನ್ನು 5 ಮತ್ತು 6 ನೇ ಪ್ರತಿವಾದಿಗಳು ಸಮನಾಗಿ ಭಾಗ ಮಾಡಿಕೊಳ್ಳಬೇಕೆಂದು ತಿಳಿಸಿರುತ್ತಾರೆ.

13. 14 ನೇ ದಾವಾ ಆಸ್ತಿಯನ್ನು ಮಾರಾಟ ಮಾಡಿ ವಾದಿಗಳಿಗೆ ಹಣ ಕೊಟ್ಟಿಲ್ಲ ಬದಲಾಗಿ ಆ ಹಣವನ್ನು ನಾನೇ ಉಪಯೋಗಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ ತೀರಿಕೊಳ್ಳುವಾಗ ನನ್ನ ಐದು ಜನ ಸಹೋದರಿಯರ ಮದುವೆಯಾಗಿದ್ದು ಒಬ್ಬ ಸಹೋದರಿಯರ ಅಂದರೆ 7 ನೇ ಪ್ರತಿವಾದಿಯ ಮದುವೆಯಾಗಿರಲಿಲ್ಲ.

14. ಈ ದಾವೆಯಲ್ಲಿ ಸಾಕ್ಷಿ ಕೊಟ್ಟ ನರಸಿಂಹಯ್ಯರವರು ರಾಮೋಹಳ್ಳಿಗೆ ಸೇರಿದವರಾಗಿದ್ದು ಅವರು ನಮ್ಮ ಅಂಗಡಿಗೆ ವ್ಯಾಪಾರ ಮಾಡಲು ಬಂದು ಹೋಗಿ ಮಾಡುತ್ತಿದ್ದರು. ಅವರು ಅಂಗಡಿಗೆ ಬರುತ್ತಿದ್ದರಿಂದ ನನಗೆ ಅವರ ಪರಿಚಯ ಆಗಿರುತ್ತದೆ. ನರಸಿಂಹಯ್ಯರವರು ನನಗೆ ಯಾವ ಇಸವಿಯಿಂದ ಪರಿಚಯ ಹೇಳಲು ಬರುವುದಿಲ್ಲ. ನನ್ನ ತಂದೆ ತೀರಿಕೊಂಡ ನಂತರ ನನ್ನ ತಾಯಿಯ ಹೇಳಿಕೆಯ ಮೇರೆಗೆ ನಾನು ಕುಟುಂಬದ ಯಾವುದೇ ವ್ಯವಹಾರವನ್ನು ನೋಡಿಕೊಳ್ಳುತ್ತಿರಲಿಲ್ಲ ನಾನು ಬೆಂಗಳೂರಿನಲ್ಲಿ ವಾಸವಿದ್ದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ 5 ಮತ್ತು 6 ನೇ ಪ್ರತಿವಾದಿಗಳು ಭಾಗ ಮಾಡಿಕೊಳ್ಳಬೇಕೆಂದು ನನ್ನ ತಂದೆ ಎಂದಿಗೂ ಹೇಳಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಭಾಗ ಮಾಡಿಕೊಳ್ಳುವ ಬಗ್ಗೆ ಹೇಳಿರುವ ವಿಷಯ ಕುಟುಂಬದ ಎಲ್ಲಾ ಸದಸ್ಯರಿಗೂ ಗೊತ್ತಿರುತ್ತದೆ.

15. 2 ನೇ ವಾದಿಯ ಮದುವೆ 1979 ರಲ್ಲಿ ಆಗಿರಬಹುದು. 1 ನೇ ವಾದಿಯ ಮದುವೆ 1976 ರಲ್ಲಿ ಆಗಿರುತ್ತದೆ. ವಾದಿಗಳ ಮದುವೆಯಾದ ನಂತರ ಅವರು ತಮ್ಮ ತಮ್ಮ ಗಂಡಂದಿರ ಮನೆಯಲ್ಲಿ ವಾಸಮಾಡುತ್ತಿದ್ದರು.

16. ನಾನು ನನ್ನ ವೃತ್ತಿಯಲ್ಲಿ ಆದಾಯ ಬರುವ ಬಗ್ಗೆ ಆದಾಯ ತೆರಿಗೆ ಪಾವತಿ ಮಾಡುತ್ತಿಲ್ಲ. ನಾನು

ಇದುವರೆಗೂ ಆದಾಯ ತೆರಿಗೆ ಪಾವತಿ ಮಾಡಿಲ್ಲ. ನನ್ನ ತಂದೆ ಜೀವಂತ ಇರುವಾಗ ಹೆಣ್ಣು ಮಕ್ಕಳಿಗೆ ನಿವೇಶನಗಳನ್ನು ಕೊಡಿಸಿ ಮನೆಗಳನ್ನು ಕಟ್ಟಲು ಹಣ ಸಹ ಕೊಟ್ಟಿರುತ್ತಾರೆ. ಮದುವೆಯಾದ ನಂತರ ಹೆಣ್ಣು ಮಕ್ಕಳಿಗೆ ನನ್ನ ತಂದೆ ನಿವೇಶನಗಳನ್ನು ಕೊಡಿಸಿಲ್ಲ ಮತ್ತು ಮನೆ ಕಟ್ಟಲು ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ತೀರಿಕೊಂಡ ನಂತರ ಅಂಗಡಿಯನ್ನು ನನ್ನ ತಾಯಿ 1983-84 ರವರೆಗೆ ನೋಡಿಕೊಂಡಿದ್ದು ನಂತರ ಅಂಗಡಿ ವ್ಯವಹಾರವನ್ನು ನಿಲ್ಲಿಸಲಾಯಿತು.

17. ನಾನು ಕೇತೋಹಳ್ಳಿಯಿಂದ ಬೆಂಗಳೂರಿಗೆ ಬಂದ ನಂತರ ಅಂಗಡಿ ವ್ಯವಹಾರವನ್ನು ಹೆಣ್ಣು ಮಕ್ಕಳು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನಾನು ಸರ್ವೆ ನಂ 45/1 ರ ಬಗ್ಗೆ ಕೃಷಿ ಅಭಿವೃದ್ಧಿ ಬ್ಯಾಂಕ್ ನಲ್ಲಿ ಸಾಲ ಪಡೆದಿದ್ದು ಅದನ್ನು ಕೃಷಿಯಿಂದ ಬಂದ ಆದಾಯದಿಂದ ಸಾಲ ತೀರಿಸಿರುತ್ತೇನೆ ಎಂದರೆ ಸರಿಯಲ್ಲ. 1978 ರಲ್ಲಿ ಮನೆ ಕಳ್ಳತನ ಆಗಿರುತ್ತದೆ ಎಂದು ಹೇಳಿದ್ದು ಆ ಬಗ್ಗೆ ಪೋಲಿಸ್ ಠಾಣೆಯಲ್ಲಿ ದೂರನ್ನು ದಾಖಲಿಸಿದ್ದಿರಾ ಎಂದರೆ ಕಳ್ಳತನವನ್ನು ಸಂಬಂಧಿಕರು ಮತ್ತು ನನ್ನ ತಂದೆಯ ಸಹೋದರರು ಮಾಡಿದ್ದರಿಂದ ಪೋಲಿಸ್ ಠಾಣೆಯಲ್ಲಿ ದೂರನ್ನು ದಾಖಲೆ ಮಾಡಿಲ್ಲ ಎಂದು ಹೇಳುತ್ತಾರೆ. ಈ ವಿಷಯವನ್ನು ನಾನು ಇದೇ ಮೊದಲ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಈ ಮೊದಲು ಹೇಳುವ ಅವಶ್ಯಕತೆ ಇರಲಿಲ್ಲ ಎಂದು ಹೇಳುತ್ತಾರೆ.

18. ನನ್ನ ತಂದೆ ಬೆಂಗಳೂರಿನ ಜಯಮ್ಮ ಬಿನ್ ರಂಗಯ್ಯರವರ ಕಡೆಯಿಂದ ಕೈಸಾಲ ಮಾಡಿದ್ದರಿಂದ ಅದಕ್ಕೆ ಯಾವುದೇ ದಾಖಲೆಗಳು ಇರುವುದಿಲ್ಲ. 16 ಎಕರೆ ಜಮೀನಿನಲ್ಲಿ ಕೊಳವೆ ಬಾವಿ ಮತ್ತು ಆ ಜಮೀನಿಗೆ ಸಂಬಂಧಿಸಿದ ಖರ್ಚು ವೆಚ್ಚದ ಬಗ್ಗೆ ದಾಖಲೆಗಳು ಇರುವುದಿಲ್ಲ. ನನ್ನ ತಂದೆ ತಾಯಿ ವಾಸ ಮಾಡುತ್ತಿದ್ದ ಮನೆ ಶಿಥಿಲವಾಗಿದ್ದರಿಂದ ನಾನು ಸರ್ವೆ ನಂ 61/7 ಬಿ ರಲ್ಲಿ 50 ಚದುರ ವಿಸ್ತೀರ್ಣದ ಮನೆಯನ್ನು ನನ್ನ ತಂದೆ ಸಂಪಾದನೆ ಮಾಡಿದ ಆದಾಯದಿಂದ ಕಟ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಮತ್ತು ಡಿಬ್ಲ್ಯು 3 ಅನ್ಯೋನ್ಯವಾಗಿದ್ದು ನನಗೆ ಸಹಾಯವಾಗಲೆಂದು ಅವರು 5 ಲಕ್ಷ ರೂ ಮತ್ತು ನಿವೇಶವನ್ನು ಕೊಡಿಸಿರುವ ಬಗ್ಗೆ ಸಾಕ್ಷಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 7 ನೇ ಪ್ರತಿವಾದಿ 2010 ರಲ್ಲಿ ನನ್ನ ತಾಯಿಯ ಮಣ್ಣಿಗೆ ಮಾತ್ರ ಬಂದಿದ್ದು ಅದರ ಮೊದಲು ನಾನು ಅವರ ಮನೆಗೆ ಹೋಗಿಲ್ಲ ಅವರು ನನ್ನ ಮನೆಗೆ ಬಂದಿರಲಿಲ್ಲ ಎಂದು ಹೇಳುತ್ತಾರೆ. ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಹಾಗೂ ದಾವಾ ಆಸ್ತಿಗಳಲ್ಲಿ ವಾದಿಗಳಿಗೆ ಸಮಾನವಾದ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆ ನನಗೆ ಯಾವುದೇ ಜವಾಬ್ದಾರಿಯನ್ನು ವಹಿಸಿರಲಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನನಗೆ ಅರ್ಧ ಭಾಗ ಮತ್ತು ನನ್ನ ಅಣ್ಣನಿಗೆ ಅರ್ಧ ಭಾಗ

ಕಾನೂನಿನ ಅಡಿಯಲ್ಲಿ ಸೇರಬೇಕಾಗಿಲ್ಲ ಎಂದರೆ ಸರಿಯಲ್ಲ. ವಾದಿಗಳು ನನ್ನ ತಾಯಿ ಹಾಗೂ ನಮ್ಮನ್ನು ಭಾಗ ಬೇಕೆಂದು ಕೇಳಿದ್ದು ನಾವು ಕೊಡದೇ ಇದ್ದ ಕಾರಣ ಅವರು ಈ ದಾವೆ ಹೂಡಿರುತ್ತಾರೆ ಎಂದರೆ ಸರಿಯಲ್ಲ. ಈ ದಾವೆ ಹೂಡಿದ ನಂತರ ನಾನು ನಿಡಿ 2ನ್ನು ಸೃಷ್ಟಿ ಮಾಡಿ ಡಿ ಡಬ್ಲ್ಯು 4ರವರ ಕಡೆಯಿಂದ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ 2ನ್ನು ನನ್ನ ತಂದೆ ಬರೆದಿಲ್ಲ ಆದ ಕಾರಣ ಆ ವಿಷಯವನ್ನು ನನ್ನ ಕುಟುಂಬದ ಸದಸ್ಯರಿಗೆ ಹೇಳಿಲ್ಲ ಎಂದರೆ ಸರಿಯಲ್ಲ. ವಾದಿಗಳಿಗೆ ಸೇರಬೇಕಾದ ಭಾಗವನ್ನು ಕಬಳಿಸುವ ಉದ್ದೇಶದಿಂದ ನಾನು ನಿಡಿ 2ನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಗಳಿಗೆ ಸೇರಬೇಕಾದ ಭಾಗವನ್ನು ಕಬಳಿಸಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದು, ಸುಳ್ಳು ಸಾಕ್ಷಿದಾರರನ್ನು ತಯಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ ತೀರಿಕೊಂಡ ನಂತರ ಕುಟುಂಬದ ಆಸ್ತಿಗಳನ್ನು ನನ್ನ ತಾಯಿ ಹಾಗೂ ನನ್ನ ಅಣ್ಣನ ಒಪ್ಪಿಗೆ ಮೇರೆಗೆ ನನ್ನ ಹೆಸರಿಗೆ ಫವತಿ ಖಾತೆಯಾಗಿದ್ದು ನನ್ನ ತಾಯಿ ಒಪ್ಪಿಗೆ ಕೊಟ್ಟಿದ್ದರಿಂದ ಬೇರೆಯವರ ಸಂಬಂಧಿ ಅವಶ್ಯಕತೆ ಇರುವುದಿಲ್ಲ.

1ನೇ ವಾದಿಯ ಪರ ವಕೀಲರು 2ನೇ ವಾದಿಯ ವಕೀಲರ ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳಬೇಕೆಂದು ಕೇಳಿಕೊಂಡಿದ್ದರಿಂದ ಅಳವಡಿಸಿಕೊಳ್ಳ ಲಾಯಿತು.

ಮರು ವಿಚಾರಣೆ ಇಲ್ಲ

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**